

ಮಂಗಣ್ಣರನ್ನಾಗಿಸಿ ಕೃತಾರ್ಥರಾಗುತ್ತಿದ್ದೆವು.

ಈ ಕೊಡೆಯ ಕುರಿತು ಅದೊಂದು ಕೌತುಕವನ್ನು ಹೇಳಲೇಬೇಕು. ಇನ್ನೂ ಕಲಿಕೆಯಲ್ಲಿದ್ದ ದಿನಗಳವು. ಹುಟ್ಟಾ ನಗರವಾಸಿಯಾದವಳಿಗೆ ಮಳೆಗಾಲವೊಂದರಲ್ಲಿ ಮೂಲ ಊರಾದ ಕುಮಟಾದ ಗುಡೇಅಂಗಡಿ ಗ್ರಾಮಕ್ಕೆ ಹೋಗುವ ಅವಕಾಶ ಬಂದೊದಗಿತ್ತು. ಬಟ್ಟೆಯೊಟ್ಟಿಗೆ ಬಿಳೀ ಚುಕ್ಕೆಯ ಕೆಂಪುವರ್ಣದ ನನ್ನ ನೆಚ್ಚಿನ ವನ್ ಎಂಡ್ ಓನ್ಲೀ ವನ್‌ಫೋಲ್ಡ್ ಕೊಡೆ ಕೂಡ ಚೀಲದಲ್ಲಿ ಸ್ಥಾನ ಗಿಟ್ಟಿಸಿತ್ತು. ಮಲೆನಾಡಿನ ಮಳೆಗಾಲದ ಕುರಿತು ಕೇಳಿ ತಿಳಿದಿದ್ದೆನಷ್ಟೇ. ಅನುಭವಿಸುವ ಸದವಕಾಶ ಬಿಟ್ಟೇನೇ? ಹುರುಪಿನಲ್ಲಿ ಕೊಡೆ ಹಿಡಿದು ಸೋದರಸಂಬಂಧಿಯೊಟ್ಟಿಗೆ ಜಿಟಿಜಿಟಿ ಮಳೆಯಲ್ಲಿ ಹೊರಟದ್ದಾಗಿತ್ತು. ಭಾಗೀರಥಿಯೋ ತೆಂಗಿನ ಗರಿಯಿಂದ ಹೆಣೆದ ಗೊರಬನ್ನು ಹಾಕಿಕೊಂಡು ಬರುತ್ತೇನೆಂದಾಗ ಅವಳೊಟ್ಟಿಗೆ ಹೋಗಲು ಮರ್ಯಾದೆಯೆನ್ನಿಸಿ ಬೇಡವೆಂದಿದ್ದೆ, ಸೂಕ್ಷ್ಮವರಿತವಳು ಚಿಕ್ಕಪ್ಪಯ್ಯನ ಚೂಪು ಕೊಡೆಯನ್ನು ತಂದಿದ್ದಳು. ಕಾಲುಹಾದಿಯ ಇಕ್ಕೆಲದಲ್ಲಿ ದೃಷ್ಟಿ ಹಾಯಿಸಿದೆಲ್ಲೆಡೆ ಭತ್ತದ ಹೊಲದ ಹಚ್ಚ ಹಸುರಿನ ನೋಟ ಕಣ್ಮನ ಸೆಳೆದಿತ್ತು. ಸುಂಯ್ಯನೇ ಬೀಸುವ ಕುಳಿರ್ಗಾಳಿ, ಮಳೆಯಲ್ಲಿ ತೋಯ್ದಿರುವ ಎಳೇ ಹುಲ್ಲಿನ ವಿಶಿಷ್ಟ ಘಮ, ಅರಬ್ಬೀ ಸಮುದ್ರದ ಭೋರ್ಗರೆತದ ಹಿನ್ನೆಲೆಯ ಆ ಸ್ವಚ್ಛ ಸುಂದರ ನೋಟ... ಕಾಂಕ್ರೀಟು ಜಗದವಳನ್ನು ಮೋಡಿಗೊಳಿಸಿ ಮಂತ್ರಮುಗ್ಧಳನ್ನಾಗಿಸಿತ್ತು.

ಸೋದರಸಂಬಂಧಿ ಭಾಗೀರಥಿಯೋ ಹೊಸತನವೇನಿಲ್ಲವೆಂಬಂತೆ ಸಹಜವೆಂಬಂತಿದ್ದಳು. ಇದ್ದಕ್ಕಿದ್ದಂತೇ ಮಳೆಯ ಆರ್ಭಟ ಹೆಚ್ಚಿತ್ತು. ರಭಸದಿಂದ ಧೋ ಎಂದು ಹೊಯ್ಯಲಾರಂಭಿಸಿದ ಮಳೆಗೆ ನನ್ನ ನಾಜೂಕು ಛತ್ರಿ ತಡೆದುಕೊಳ್ಳದೇ ಪತರುಗುಟ್ಟಿದರೆ ಭಾಗೀರಥಿ ಹಿಡಿದ ಚೂಪು ಕೊಡೆ ಗಾಳಿಯ ರಭಸಕ್ಕೆ ಮಳೆ ನೀರನ್ನು ಶೇಖರಿಸುವಂತೆ ಬುಟ್ಟಿಯಾಗಿ ಮಾರ್ಪಟ್ಟಿತ್ತು! ಹೇಗೋ ಸಮೀಪದಲ್ಲಿರುವ ಅದೊಂದು ಮನೆಯನ್ನು ತಲುಪಿದ್ದೆವು. ಹೆಚ್ಚೂ ಕಡಿಮೆ ಪೂರ್ತಿಯೇ ನೆನೆದ ನಮಗೆ ಮನೆಗೆ ಹೋಗಲು ಇನ್ನಿಲ್ಲದ ಅವಸರವಿತ್ತು. ಜೊತೆಗೆ ಮುಸ್ಸಂಜೆಯ ಕೆಂಪಿನ ಬದಲು ಕಪ್ಪೇರುತ್ತಿತ್ತು. ಅದು ಭಾಗೀರಥಿಗೆ ಪರಿಚಯವಿದ್ದ ಗದ್ದೆ ನೆಟ್ಟಿ ಮಾಡಲು ಬರುವ ಒಕ್ಕಲು ಮನೆಯಾದ್ದರಿಂದ ಅವಸರಿಸಿದ ನಮಗೆ ಗೊರಬು ಕೊಟ್ಟು ಮನೆಗೆ ಹೋಗಲು ಸಹಕರಿಸಿದ್ದರು. ಅದನ್ನು ಹಾಕಿಕೊಂಡ ಮೇಲೇ ಅದರ ವೈಶಿಷ್ಟ್ಯ ತಿಳಿದದ್ದು. ಮಳೆನಾಡಿನ ರಭಸದ ಮಳೆಯ ಆರ್ಭಟಕ್ಕೆ ಸಡ್ಡು ಹೊಡೆಯಬಲ್ಲ ದೇಸೀ ಛತ್ರಿ ಎನ್ನುವುದಕ್ಕಿಂತಲೂ ಹೊದಿಕೆಯೆಂದರೇ ಸರಿಯಾದೀತು. ತಲೆಯಿಂದ ಕಾಲಿನವರೆಗೆ ಇಳಿಬಿಟ್ಟಂತಹ ಗೊರಬನ್ನು ಹಾಕಿಕೊಂಡು ಮುಂದೆ ಬಾಗಿ ನಡೆಯುವುದು ಅದ್ಭುತ ಅನುಭವವೇ ಸರಿ. ಕಾಲುದಾರಿಯಲ್ಲಿ ದೂರದಲ್ಲಿ ಹೋಗುತ್ತಿದ್ದ ಕಪ್ಪು ಆಕೃತಿಯೊಂದು ಭೂತದಂತೆ ಕಂಡು ಥಟ್ಟನೆ ನಿಂತು ಹೆದರಿಕೆಯಿಂದ ಭಾಗೀರಥಿಯ ಕೈ ಬಿಗಿಯಾಗಿ ಹಿಡಿದುಕೊಂಡಾಗ ಅವಳೇ ಸಮಾಧಾನಿಸಿದ್ದಳು. ಅದು ಭೂತಗೀತ ಯಾವುದೂ ಅಲ್ಲ, ಕಂಬಳಿಯಿಂದ ತಯಾರಿಸಿದ ಗೊರಬನ್ನು ಧರಿಸಿರುವ ಮನುಷ್ಯನಷ್ಟೇ ಎಂದು. ಒಟ್ಟಿನಲ್ಲಿ ಗೊರಬಿನ ಮಹತ್ವ ತಿಳಿಯುವಂತಾದದ್ದು ಆಗಲೇ.

ಅಂದ ಕಾಲತ್ತಿಲ್ ಮಡಚಿಯೂ ಮೂರಡಿಯಷ್ಟಿದ್ದ ಚೂಪು ಛತ್ರಿ, ಕಾಲ ಕ್ರಮೇಣದಲ್ಲಿ ರೂಪಾಂತರಗೊಂಡು ಮಡಚಿದಾಗ ಒಂದಡಿಯಷ್ಟೇ ಆಕಾರದಲ್ಲಿ ವನ್‌ಫೋಲ್ಡ್ ಆಗಿಯೂ ನಂತರದಲ್ಲಿ ಅರ್ಧ ಅಡಿಯಷ್ಟಾಗಿ ಟೂಫೋಲ್ಡ್, ಕಾಲು ಅಡಿಯಷ್ಟಾಗಿ ಥ್ರೀ ಫೋಲ್ಡಾಗಿ ಆಧುನಿಕ ಜಗದ ಥಳುಕಿಗೆ ತಕ್ಕಂತೆ ನಾಜೂಕಿಯಾಗಿ ಬದಲಾಗಿ ಕೊಡೆಯ ವಿನ್ಯಾಸ, ಬಣ್ಣದಲ್ಲಿ ಸಾಕಷ್ಟು ಬದಲಾವಣೆಯಾದರೂ, ನಾ ಬಳಸುವ ಕೊಡೆಗಳು ಸಾಕಷ್ಟು ಬಾರಿ ಬದಲಾದರೂ ನನ್ನ ಮೊದಲ ಆ ಬಿಳೀಚಿಕ್ಕೆಯ ಕೆಂಪು ಕೊಡೆ ಮಾತ್ರ ಏಕಮೇವಾದ್ವಿತೀಯವೇ ಸರಿ. ಅದರೊಂದಿಗೆ ಬೆಸೆದಿರುವ ಅನೇಕಾನೇಕ ಸವಿ ನೆನಪುಗಳಿಂದಾಗಿ ಕಪಾಟಿನ ಮೂಲೆಯಲ್ಲೊಂದು ಶಾಶ್ವತ ಸ್ಥಾನ ಗಳಿಸಿದೆ. ಪರಿಣೀತಳಾಗಿ ಬೆಚ್ಚನೆಯ ತವರಿನಿಂದ ಶಾಶ್ವತವಾಗಿ ಹೊರಬೀಳುವಾಗ ಜೊತೆಗೆ ತಂದ ಕೆಲವೇ ವಸ್ತುಗಳಲ್ಲಿ ಇದೂ ಒಂದಾಗಿತ್ತು. ಕೆಲವೇ ಎಂಬ ಪದಬಳಕೆಯೇಕೆಂದರೆ ಆಗಿನ ಕಾಲವೇ ಹಾಗಿತ್ತು. ಸಂಬಂಧಗಳಿಗೆ ಮಹತ್ವ, ಬೆಲೆಯಿದ್ದ ಕಾಲ ಅದಾಗಿತ್ತು. ಆದರೀಗ ಆಡಂಬರಕ್ಕೇ ಬೆಲೆ, ಮನ್ನಣೆ; ಐಷಾರಾಮೀ ವಸ್ತುಗಳದ್ದೇ ಕಾರುಬಾರು. ಹಾಗಿದ್ದೂ ತೃಪ್ತಿ, ಸಮಾಧಾನ ಮರೀಚಿಕೆಯಾಗಿ ಹಪಹಪಿಸುವುದೇ ಬದುಕಾಗಿದೆ. ಬಿಡಿ, ವಿಷಯಕ್ಕೆ ಬರುವುದಾದರೆ ದಶಕಗಳ ನಂತರದಲ್ಲಿ ಇದೀಗ ಆ ವಸ್ತುಗಳಾವುವೂ ಇಲ್ಲವಾದರೂ ಕೊಡೆ ಮಾತ್ರ ಇನ್ನೂ ಇದೆ. ಅದರೊಟ್ಟಿಗಿನ ನಂಟು ದಿನ ಕಳೆದಂತೆ ಹೊಸತನ ಪಡೆಯುತ್ತಿದೆ. ಮುರಿದ ಕಡ್ಡಿಗಳು, ತೂತು ಬಿದ್ದು ಬಣ್ಣಗೆಟ್ಟು ಕಳೆಗುಂದಿದ್ದರೂ ಚೀಲದಿಂದ ಅದನ್ನು ಆಗಾಗ ಹೊರತೆಗೆದು ಕೈಯಲ್ಲಿ ಹಿಡಿದು ಗತಕಾಲಕ್ಕೆ ಜಾರಿ ಮೌನ ಸಂಭಾಷಣೆಯಲ್ಲಿ ತೊಡಗಿಕೊಳ್ಳುತ್ತೇನೆ. ಬಾಲ್ಯದಲ್ಲಿ ನನ್ನ ಹೆದರಿಕೆಗೆ ಕಾರಣವಾಗಿದ್ದ ಕಪ್ಪು ದೇಹದ ಚೂಪು ಕೊಡೆ ಮಾತ್ರ ಇಂದಿಗೂ ಕಾಣಸಿಗುತ್ತಿದ್ದು ವೃದ್ಧ ವಾಯುವಿಹಾರಿಗಳಿಗೆ ಊರುಗೋಲಿನಂತೆಯೂ, ಬೀದಿ ನಾಯಿಗಳನ್ನು ಓಡಿಸಲೂ ನೆರವಾಗುತ್ತಾ ತನ್ನ ಸೇವೆ ಮುಂದುವರಿಸಿದೆ. ಅಲ್ಲದೆ ತನ್ನ ಕೊಕ್ಕೆ ಮೂತಿಯಿಂದಾಗಿ ಮುಂಜಾವಿನ ಹೂ ಕಳ್ಳರಿಗೂ ನಿಸ್ವಾರ್ಥ ಸೇವೆ ಒದಗಿಸುತ್ತಿದೆ.

ಕೊಡೆಗಿರುವ ಮಹತ್ವವೇ 'ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರಿಯಲ್ಲೂ ಕೊಡೆ ಹಿಡಿದನಂತೆ!' ಗಾದೆ ಮಾತಿಗೂ, 'ಬಲು ಛತ್ರಿ ನನ್ಮಗ ಕಣ್ರೀ...' ನುಡಿಗಟ್ಟಿನ ಹುಟ್ಟಿಗೂ ಕಾರಣವಾಗಿದೆಯೇನೋ? ಕೊಡೆಯ ಬಗ್ಗೆ ಲೇಖನ ಶುರುವಿಟ್ಟದ್ದಕ್ಕೇ ಇರಬಹುದು ಇಲ್ಲೀಗ ಜೋರಂಪ್ರತಿ ಮಳೆ ಸುರಿಯುತ್ತಿದೆ. ಖಡಕ್ ಚಹಾದೊಟ್ಟಿಗೆ ಬಿಸಿಬಿಸಿ ಮಿರ್ಚಿಭಜಿ, ಗಿರ್ಮಿಟ್ಟು ಮೆಲ್ಲುವ ಆಸೆ ಹುಟ್ಟಿಸಿದೆ.

ಪ್ರತಿಕ್ರಿಯಿಸಿ: feedback@sudha.co.in